ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1261/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮುದಿಯಪ್ಪ** | | |
| **ತಂದೆಃಹೆಸರು** | **ಯಂಕಪ್ಪ** | **ಪಿಡಬ್ಲೂಃ** | **4** |
| **ವಯಸ್ಸು** | **40 ವರ್ಷ** | **ಸಿಡಬ್ಲೂಃ** | **4** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಬೆಳಗುರ್ಕಿ** | | |

**ದಿನಾಂಕ 11-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ರಿಂದ 3 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ದಿ.12-08-2023 ರಂದು ಸಂ.4-30 ಕ್ಕೆ ನಾನು & ಬಸವರಾಜ್ ರವರು ನಮ್ಮ ಹೊಲದಲ್ಲಿ ಕೆಲಸ ಮುಗಿಸಿ ಮನೆಗೆ ಹೊರಟಿದ್ದೆವು. ಚಾಸಾ-2 ರವರ ಮನೆಯ ಮುಂದೆ ಹೊರಟಿದ್ದಾಗ, ಅಲ್ಲಿ ಬಾಯಿ ಮಾಡುವ ಶಬ್ದ ಕೇಳಿಸಿತು, ನಾವು ಹೋಗಿ ನೋಡಿದಾಗ ಆರೋಪಿತರೆಲ್ಲರೂ ಚಾಸಾ-1 & 2 ರವರಿಗೆ ಹೊಡೆಯುತ್ತಿದ್ದರು. ನಾನು ಹೋಗಿ ಬಿಡಿಸಲು ಹೋದೆ, ಆಗ ಆರೋಪಿತರು ನಿಮ್ಮದೇನು, ನೀವು ಬಿಡಿಸಲು ಬಂದರೆ, ನಿಮ್ಮ ಮೇಲೆ ಕೇಸ್ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು. ನಂತರ ನಾವು ಬಂದೆವು. ಸದರಿ ವಿಚಾರವಾಗಿ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-2 ರವರ ಮನೆಯ ಮುಂದಿನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಜೋರಾಗಿ ಬಾಯಿ ಮಾಡುವ ಶಬ್ದ ಕೇಳಿತ್ತು, ನೀವು ಹೋಗಿ ನೋಡಿದಾಗ ಆರೋಪಿತರು ಗುಂಪುಕಟ್ಟಿಕೊಂಡು ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. 4 & 5ನೇ ಆರೋಪಿತರು ಸಂಸಾರ ಕೆಟ್ಟು ಹೋಗಲು ನೀನೇ ಕಾರಣ ಎಂದು ಬೈದಾಡುತ್ತಿದ್ದರು ಎಂದರೆ ಸರಿ. ನಂತರ ಕೈಗಳಿಂದ ಆಕೆಗೆ ಹೊಡಿಬಡಿ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-2 ರವರಿಗೆ 2 & 3 ನೇ ಆರೋಪಿತರು ಸಂಸಾರ ಕೆಟ್ಟು ಹೋಗಲು ನೀನೇ ಕಾರಣ ಎಂದು ಬೈದಾಡುತ್ತಿದ್ದರು ಎಂದರೆ ಸರಿ. ಆರೋಪಿತರು ಚಾಸಾ-2 ರವರಿಗೆ ಕೈಗಳಿಂದ ಮೈಕೈಗೆ ಹೊಡೆದರು, ನೆಲಕ್ಕೆ ಕೆಡವಿ ಕಾಲಿನಿಂದ ಒದ್ದರು ಎಂದರೆ ಸರಿ. ಆಗ ಅನಾರೋಗ್ಯದಿಂದ ಬಳಲುತ್ತಿದ್ದ ಚಾಸಾ-1 ರವರ ಗಂಡ ಬಿಡಿ ಎಂದು ಕೂಗಿಕೊಂಡಾಗ, 4 & 5ನೇ ಆರೋಪಿತರು ಹೋಗಿ ಚಾಸಾ-1 ರವರ ಗಂಡನಿಗೆ ಕಾಲಿನಿಂದ ಒದ್ದರು ಎಂದರೆ ಸರಿ. ನಂತರ ನೀವು & ಚಾಸಾ-3 ರವರು ಹೋಗಿ ಬಿಡಿಸಿಕೊಂಡಿರಿ ಎಂದರೆ ಸರಿ. ಆಗ ಆರೋಪಿತರೆಲ್ಲರೂ ಕೂಡಿಕೊಂಡು ನಮ್ಮ ಮಗಳ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**